# ಸೇತುಬಂಧ ಪೂರ್ವ ಪರೀಕ್ಷೆ 2026-27

**ವಿಷಯ: ಕನ್ನಡ ತರಗತಿ: 5ನೇ ಅಂಕಗಳು: 10 ಸಮಯ: 45 ನಿ**

**ವಿದ್ಯಾರ್ಥಿಯ ಹೆಸರು: ______________________________ ಹಾಜರಾತಿ ಸಂಖ್ಯೆ: __________**

---

**ಪ್ರಶ್ನೆ 1: ಕೆಳಗಿನ ಪುಟ್ಟ ವಾಕ್ಯವನ್ನು ಗಮನವಿಟ್ಟು ಓದಿ, ಕೊಟ್ಟಿರುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ:**

"ಕಾಡುಗಳು ನಮಗೆ ಮಳೆ ತರುತ್ತವೆ ಮತ್ತು ಗಾಳಿಯನ್ನು ಶುದ್ಧವಾಗಿಡುತ್ತವೆ. ಆದ್ದರಿಂದ ನಾವು ಮರಗಳನ್ನು ಬೆಳೆಸಬೇಕು."

**ಪ್ರಶ್ನೆ: ಈ ವಾಕ್ಯದ ಪ್ರಕಾರ, ನಾವು ಮರಗಳನ್ನು ಏಕೆ ಬೆಳೆಸಬೇಕು?**

ಅ) ಮರಗಳಿಂದ ಕೇವಲ ಆಟದ ಸಾಮಗ್ರಿಗಳನ್ನು ಮಾಡಲು ಸಹಾಯವಾಗುವುದರಿಂದ.

ಆ) ಮರಗಳು ನಮಗೆ ಮಳೆ ತರುವುದರಿಂದ ಮತ್ತು ಗಾಳಿಯನ್ನು ಶುದ್ಧವಾಗಿಡುವುದರಿಂದ.

ಇ) ಕಾಡಿನಲ್ಲಿರುವ ಪ್ರಾಣಿಗಳನ್ನು ದೂರ ಓಡಿಸಲು.

ಈ) ಮರಗಳು ನಮಗೆ ಯಾವುದೇ ಪ್ರಯೋಜನ ನೀಡದಿದ್ದರೂ ಸುಮ್ಮನೆ ಬೆಳೆಸಬೇಕು.

ಉತ್ತರ:______________________________________________________

**ಪ್ರಶ್ನೆ 2. ಕೆಳಗಿನ ಸಣ್ಣ ಪ್ಯಾರಾವನ್ನು ಓದಿ, ಕೊಟ್ಟಿರುವ ಪ್ರಶ್ನೆಗೆ ಉತ್ತರಿಸಿ:**

"ರಾಮು ಒಬ್ಬ ಬುದ್ಧಿವಂತ ಹುಡುಗ. ಅವನು ಪ್ರತಿದಿನ ಬೆಳಗ್ಗೆ ಬೇಗ ಎದ್ದು ತೋಟದ ಗಿಡಗಳಿಗೆ ನೀರು ಹಾಕುವ ಕೆಲಸ ಮಾಡುತ್ತಿದ್ದನು"

**ಪ್ರಶ್ನೆ: ರಾಮು ಪ್ರತಿದಿನ ಬೆಳಗ್ಗೆ ಎದ್ದು ಯಾವ ಕೆಲಸ ಮಾಡುತ್ತಿದ್ದನು?**

ಉತ್ತರ: ______________________________________________________

**ಪ್ರಶ್ನೆ 3.ನಿಮ್ಮ ನೆಚ್ಚಿನ ಸಾಕುಪ್ರಾಣಿಯ ಬಗ್ಗೆ 3 ರಿಂದ 5 ಸರಳ ವಾಕ್ಯಗಳನ್ನು ಬರೆಯಿರಿ.**

ಉತ್ತರ: ______________________________________________________

______________________________________________________________

______________________________________________________________

______________________________________________________________

______________________________________________________________

**ಪ್ರಶ್ನೆ 4. ಶಾಲೆ ಮುಗಿದ ನಂತರ ಮನೆಗೆ ತಡವಾಗಿ ಹೋದಾಗ, ಅಮ್ಮ ನಿಮಗೆ "ಏಕೆ ತಡವಾಯಿತು?" ಎಂದು ಕೇಳುತ್ತಾರೆ. ಅದಕ್ಕೆ ನೀವು ನೀಡುವ ಒಂದು ಸರಳ ಕಾರಣದ ವಾಕ್ಯವನ್ನು ಬರೆಯಿರಿ..**

ಉತ್ತರ: ______________________________________________________

______________________________________________________________

______________________________________________________________

______________________________________________________________

**ಪ್ರಶ್ನೆ 5. ಕೆಳಗಿನ ಒಗಟನ್ನು ಓದಿರಿ ಮತ್ತು ಸರಿಯಾದ ಉತ್ತರವನ್ನು ಊಹಿಸಿ ಬರೆಯಿರಿ:**

"ರೆಕ್ಕೆಯಿಲ್ಲದಿದ್ದರೂ ಗಾಳಿಯಲ್ಲಿ ಹಾರುತ್ತದೆ, ಬಾಲವಿದ್ದರೂ ಪ್ರಾಣಿಯಲ್ಲ. ನಾನಾರು?"

ಉತ್ತರ: ______________________________________________________

**ಪ್ರಶ್ನೆ 6. ಕೆಳಗಿನ ಸಣ್ಣ ಪ್ರಕಟಣೆಯನ್ನು (ಮುದ್ರಿತ ಸಾಲುಗಳನ್ನು) ಸ್ವತಂತ್ರವಾಗಿ ಓದಿ, ಕೊಟ್ಟಿರುವ ಪ್ರಶ್ನೆಗೆ ಉತ್ತರ ಬರೆಯಿರಿ:**

"ಶಾಲಾ ನೋಟಿಸ್ ಬೋರ್ಡ್: ನಾಳೆ ದಿನಾಂಕ 28ರಂದು ಶಾಲಾ ಮೈದಾನದಲ್ಲಿ 'ವಿಜ್ಞಾನ ವಸ್ತುಪ್ರದರ್ಶನ' ನಡೆಯಲಿದೆ. ಆಸಕ್ತ ವಿದ್ಯಾರ್ಥಿಗಳು ತಮ್ಮ ಹೆಸರನ್ನು ಇಂದು ಸಂಜೆಯೊಳಗೆ ವಿಜ್ಞಾನ ಶಿಕ್ಷಕರಿಗೆ ನೀಡಬೇಕು."

**ಪ್ರಶ್ನೆ: ಈ ಪ್ರಕಟಣೆಯ ಪ್ರಕಾರ, ವಿದ್ಯಾರ್ಥಿಗಳು ತಮ್ಮ ಹೆಸರನ್ನು ಯಾರಿಗೆ ನೀಡಬೇಕು?**

ಉತ್ತರ: ________________________________


**ಪ್ರಶ್ನೆ 7. ಕೆಳಗಿನ ವಾಕ್ಯವನ್ನು ಓದಿ, ಅದರಲ್ಲಿ ಗೆರೆ ಎಳೆದ ಪದದ ಅರ್ಥವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ:**

"ಬೇಸಿಗೆಯ ಬಿಸಿಲಿಗೆ ಕೆರೆ, ಬಾವಿಗಳೆಲ್ಲ ಒಣಗಿ ಹೋಗಿದ್ದರಿಂದ ಊರಿನ ಜನರೆಲ್ಲ ಜಲಕ್ಕಾಗಿ ಪರದಾಡಿದರು."

**ಪ್ರಶ್ನೆ: ಈ ವಾಕ್ಯದಲ್ಲಿ ಬಂದಿರುವ 'ಜಲ' ಎಂಬ ಪದದ ಅರ್ಥವೇನು?**

ಉತ್ತರ: ________________________________________________________

**ಪ್ರಶ್ನೆ 8.** **ಈ ಸನ್ನಿವೇಶಕ್ಕೆ ಸಂಬಂಧಿಸಿದಂತೆ ನಿಮ್ಮ ಸ್ವಂತ ಮಾತುಗಳಲ್ಲಿ ಎರಡು ಸರಳ ವಾಕ್ಯಗಳನ್ನು ಬರೆಯಿರಿ.**



ಉತ್ತರ: ______________________________________________________________

______________________________________________________________

______________________________________________________________

______________________________________________________________

**ಪ್ರಶ್ನೆ 9.**"ಕೆಲವರು ಹಬ್ಬಗಳ ಸಮಯದಲ್ಲಿ ರಸ್ತೆಯಲ್ಲಿ ಹಾಗೂ ಮನೆಯ ಮುಂದೆ ಪಟಾಕಿಗಳನ್ನು ಹೊಡೆದು ಸಂಭ್ರಮಿಸುತ್ತಾರೆ." ಈ ರೀತಿ ಪಟಾಕಿ ಹೊಡೆಯುವುದರಿಂದ ಪರಿಸರಕ್ಕೆ ತೊಂದರೆಯಾಗುತ್ತದೆಯೇ? ನಿಮ್ಮ ಆಲೋಚನೆಯನ್ನು ಒಂದು ಸರಳ ವಾಕ್ಯದಲ್ಲಿ ತಿಳಿಸಿ.

ಉತ್ತರ: ______________________________________________________________

______________________________________________________________

______________________________________________________________

**ಪ್ರಶ್ನೆ 10.** "ಒಂದು ಮಡಕೆಯಲ್ಲಿ ಸ್ವಲ್ಪವೇ ನೀರಿತ್ತು. ಒಂದು ಕಾಗೆಯು ಮಡಕೆಗೆ ಸಣ್ಣ ಸಣ್ಣ ಕಲ್ಲುಗಳನ್ನು ಹಾಕಿ ನೀರು ಮೇಲಕ್ಕೆ ಬರುವಂತೆ ಮಾಡಿತು" — ಈ ಪ್ರಸಿದ್ಧ ಚಿತ್ರದ ಸನ್ನಿವೇಶವನ್ನು ನೆನಪಿಸಿಕೊಂಡು, ಈ ಕಥೆಯಿಂದ ನಮಗೆ ತಿಳಿಯುವ 'ನೀತಿ' ಏನೆಂಬುದನ್ನು ಯಾವುದೇ ವ್ಯಾಕರಣ ದೋಷವಿಲ್ಲದೆ ಒಂದು ಸ್ಪಷ್ಟ ವಾಕ್ಯದಲ್ಲಿ ಬರೆಯಿರಿ.

ಉತ್ತರ: ______________________________________________________________

# ಸೇತುಬಂಧ ಪೂರ್ವ ಪರೀಕ್ಷೆ - ಮಾದರಿ ಉತ್ತರಗಳು

ಉತ್ತರ ೧: ಆ) ಮರಗಳು ನಮಗೆ ಮಳೆ ತರುವುದರಿಂದ ಮತ್ತು ಗಾಳಿಯನ್ನು ಶುದ್ಧವಾಗಿಡುವುದರಿಂದ

ಉತ್ತರ ೨: ರಾಮು ಪ್ರತಿದಿನ ಬೆಳಗ್ಗೆ ಎದ್ದು ತೋಟದ ಗಿಡಗಳಿಗೆ ನೀರು ಹಾಕುತ್ತಿದ್ದನು.

ಉತ್ತರ ೩: ನಾಯಿ ನನ್ನ ಸಾಕುಪ್ರಾಣಿ. ಅದು ಮನೆ ಕಾಯುತ್ತದೆ. ಅದಕ್ಕೆ ಹಾಲು ಅಂದರೆ ಇಷ್ಟ.

ಉತ್ತರ 4: ಅಮ್ಮ, ಶಾಲೆ ಮುಗಿದ ಮೇಲೆ ಗೆಳೆಯರ ಜೊತೆ ಸ್ವಲ್ಪ ಸಮಯ ಆಟ ಆಡುತ್ತಿದ್ದೆ, ಅದಕ್ಕೆ ತಡವಾಯಿತು.

ಉತ್ತರ ೫: ಗಾಳಿಪಟ

ಉತ್ತರ ೬: ವಿಜ್ಞಾನ ಶಿಕ್ಷಕರಿಗೆ ನೀಡಬೇಕು.

ಉತ್ತರ ೭: ನೀರು

ಉತ್ತರ ೮: ವಿದ್ಯಾರ್ಥಿಗಳ ಅಭಿವ್ಯಕ್ತಿ.

ಉತ್ತರ ೯: ವಾಯು ಮಾಲಿನ್ಯ , ಶಬ್ದ ಮಾಲಿನ್ಯ.

ಉತ್ತರ ೧೦: ಉಪಾಯ ಬಲ್ಲವನಿಗೆ ಅಪಾಯವಿಲ್ಲ.